ಪ್ರೀತಿಯಿಂದ ಸ್ವೀಕರಿಸಿದವರು. ಅದವರ ಪ್ರವೃತ್ತಿಯು ಹೌದು. ಅವರು ಸುದ್ದಿಯ ಅನ್ವೇಷಣೆಯಲ್ಲಿರುತ್ತಾರೆ. ಸುಳಿವು ಸಿಕ್ಕ ತಕ್ಷಣ, ಅದರ ಆಳಕ್ಕಿಳಿದು ಸತ್ಯಶೋಧನೆಗೆ ಹೊರಡುತ್ತಾರೆ. ಬಣ್ಣ ಬಯಲುಗೊಳಿಸುತ್ತಾರೆ. ಅದಕ್ಕಾಗಿ ಅಪಾಯವನ್ನೆದುರು ಹಾಕಿಕೊಳ್ಳಲು ಹೆದರುವುದಿಲ್ಲ. ಅವರ ವರದಿಯ ಸತ್ಯವನ್ನು ಪ್ರಶ್ನೆಮಾಡಿ, ಸುಳ್ಳೆಂದು ಹೇಳುವ ಧೈರ್ಯ ಸುದ್ದಿಯ ಬಲೆಗೆ ಸಿಕ್ಕವರಿಗಿರುವುದಿಲ್ಲ. ಪಾಟೀಲ ಒಳ್ಳೇ ಧ್ಯೇಯವಂತ ಪತ್ರಕರ್ತನೇ. ಸುದ್ದಿಯನ್ನು ಪ್ರಾಮಾಣಿಕವಾಗಿ ವರದಿ ಮಾಡುತ್ತಿದ್ದ. ಊಹೆಯಿಂದ ಜೊಳ್ಳು ತುಂಬಿ ಬರೆಯುತ್ತಿರಲಿಲ್ಲ. ಆದರೆ ಸುಮ್ಮನೆ ಸಾಹಸಕ್ಕಿಳಿಯುವಂಥವನಲ್ಲ. 'ಪ್ರಸಿದ್ಧಿ ಬಂದ್ರ ಕೆಲವರ ಕಣ್ಣು ಬೀಳ್ತಾವ ಅಂದಿದ್ದೆ. ಅದನ ಕೇಳಾಕ್ಹತ್ತೀಯನು?' ಅಂತ ನಕ್ಕವ 'ನಂಗದಷ್ಟು ಗೊತ್ತಿಲ್ಲ, ಬೇಕಾದ್ರ ಚುಕ್ಕೀನ ಕರಿಯಾನ. ನೀನೂ ಫೋನು ಮಾಡು, ನಾನೂ ಮಾಡಿರತೇನಿ...' ಅಂದ.

ಅವಳ ಹೆಸರು ಚಂದ್ರಮಾ ಅಂತಿತ್ತು. ಯಾವುದೇ ಉಡುಪು ಧರಿಸಿದರು ಹಣೆಯ ಮೇಲೆ ಮಾತ್ರ, ಒಂದು ಚುಕ್ಕಿಯಷ್ಟೆ ಬೊಟ್ಟಿಟ್ಟುಕೊಳ್ಳುವುದು ಅವಳಿಗೆ ಪ್ರಿಯವಾಗಿತ್ತು. ಸ್ನೇಹಿತರು ಚುಕ್ಕಿಚಂದ್ರಮಾ ಅಂತ ತಮಾಷೆಗೆ ಕರೆದರು. ಕ್ರಮೇಣ ಚುಕ್ಕಿ ಅಂತಲೆ ಅವಳ ಹೆಸರು ರೂಢಿಯಾಗಿ ಹೋಗಿತ್ತು. ಆನಂದನಿಗೂ ಅವಳ ಪರಿಚಯವಿದೆ. ಒಂದು ಸುಳಿವು ಸಿಕ್ಕರೆ ಅದರ ಬೆನ್ನು ಹತ್ತುವುದು ಅವಳಿಗೆ ಚಟವಾಗಿ ಹೋಗಿತ್ತು. ಅದವಳ ಅಸ್ಮಿತೆಯಾದಂತೇ ದೌರ್ಬಲ್ಯವೂ ಹೌದು ಅಂತ ಆಪ್ತರು ಬಯ್ಯುತ್ತಿದ್ದರು. ಹಲವುಬಾರಿ ಗಂಡಾಂತರದಿಂದ ಕೂದಲೆಳೆಯಲ್ಲಿ ಪಾರಾಗಿದ್ದಳು. ಸುಮ್ಮಸುಮ್ಮನೆ ಬೇಡಾದ್ದನ್ನೆಲ್ಲ ಮೈಯ ಮೇಲೆ ಯಾಕೆ ಹಾಕ್ಕೊಳತೀಯ ಅಂತ ಸ್ನೇಹಿತರು ಎಚ್ಚರಿಸುತ್ತಿದ್ದರು. ಆದರವಳ ಜಾಯಮಾನ ಅವಳನ್ನು ಹಿಂದೇಟು ಹಾಕಲು ಬಿಡುತ್ತಿರಲಿಲ್ಲ. ಅವಳು ಯಾವುದಾದರು ಆಫೀಸಿಗೊ, ಕಾರಖಾನೆಗೊ ಬಂದಳೆಂದರೆ ಅಲ್ಲಿಯ ಸಿಬ್ಬಂದಿ, ಅವಳು ವಾಪಸಾಗುವವರೆಗೂ ಗುಮಾನಿಯಿಂದ ವೀಕ್ಷಿಸುತ್ತ ಕಟ್ಟೆಚ್ಚರ ವಹಿಸುತ್ತಿದ್ದರು. ಆನಂದ ಫೋನು ಮಾಡಿದಾಗ ಅವಳು ಯಾವುದೊ ಕೆಲಸಕ್ಕೆ ಕೊಳ್ಳೇಗಾಲಕ್ಕೆ ಬಂದಿದ್ದಳು. 'ಈಗ ಪಾಟೀಲ ಫೋನು ಮಾಡಿದ್ದ. ಕೆಲಸ ಮುಗಿಸಿ ಬುಧವಾರ ವಾಪಸು ಹೋಗತೀನಿ. ರವಿವಾರ ನಿಮ್ಮಲ್ಲಿಗೆ ಬರತೀನಿ. ನಂಗೂ ಆ ಭವನ ನೋಡ್ಡೋ ಆಸೆಯಾಗಿದೆ. ಪಾಟೀಲನು ಬರೋ ಹಾಗಿದೆ' ಅಂದಳು.

ರವಿವಾರ ಬಸ್ಸಿಗೆ ಬಂದವರನ್ನು ಆನಂದನೆ ಕರೆತಂದ. ಸ್ನಾನವಾಗಿ ತಿಂಡಿ ಚಹ ಮುಗಿಸಿ ಏಳುತ್ತಿದ್ದಂತೆ ಚುಕ್ಕಿ ಮನೆ ನೋಡಲು ಎದ್ದುಬಿಟ್ಟಳು. ಅಷ್ಟು ಎತ್ತರವಿಲ್ಲ. ಸ್ವಲ್ಪ ದಪ್ಪನೆ ಶರೀರವೇ. ರುಚಿಯೆನಿಸಿದ ತಿಂಡಿಯನ್ನು ತಿನ್ನುತ್ತಾ 'ತೆಳು ನಡು, ತೇಲುನಡೆ... ಅದೆಲ್ಲ ನಂಗಲ್ಲ ಬಿಡೇ' ಅಂತ ಪ್ರಾಸಮಯವಾಗಿ ಹಾಸ್ಯ ಮಾಡುತ್ತಿದ್ದಳು. ಜೀನ್ಸ್ ಪ್ಯಾಂಟಿನ ಮೇಲೆ ಕಂದುಬಣ್ಣದ ಶರ್ಟ್ ಹಾಕಿದವಳ ಹಣೆ ನೋಡಿದ. ಕಂದುಬಣ್ಣದ ಚುಕ್ಕಿಯಿತ್ತು. ಅವನ ಮುಖದಲ್ಲಿಯ ಮುಗುಳ್ನಗೆ ಅರ್ಥವಾಗಿ 'ಅದೀಗ ನನ್ನ ಸಿಗ್ನೇಚರಿದ್ದಂತೆ ಕಣೋ' ಅನ್ನುತ್ತ ಮುಂದೆ ಹೆಜ್ಜೆಯಿಟ್ಟಳು. ಮನೆಯನ್ನೆಲ್ಲ ಸುತ್ತಾಡಿ ನೋಡಿದವಳಿಗೆ ವಿಸ್ಮಯವಾಗಿತ್ತು. ಸಾವಿರಾರು ವರ್ಷ ಹಿಂದಿನ ಕಾಲಚಕ್ರದ ಚೂರೊಂದು ಸಿಡಿದು, ತನ್ನೆದುರು ಈಗಷ್ಟೆ ಬಿದ್ದಂತೆ ಅನಿಸಿಬಿಟ್ಟಿತು! ವರದಿ ಓದಿದ್ದಳು, ಫೋಟೊ ನೋಡಿದ್ದಳು, ಆದರೆ ಹೀಗಿರಬಹುದು ಅನಿಸಿರಲಿಲ್ಲ ಅನ್ನುವ ಬೆರಗು ತುಂಬಿ, ಯಾವುದೋ ಆಲೋಚನೆಯಲ್ಲಿ ಕಳೆದುಹೋದಂತೆ ಕುಳಿತಳು. 'ಚುಕ್ಕೀ, ಮೊನ್ನೆ ಪತ್ರಿಕೇಲಿ ಒಂದು ಸುದ್ದಿ ಹಾಕಿದಾರೆ. ಆದರೆ ನಾವು ಯಾರಿಗು ಹೇಳಿಯೇ ಇಲ್ಲ. ಅದೇ ಥರಾ...' ಅವನ ಮಾತು ತಡೆದ ಚುಕ್ಕಿ ಕುಳಿತುಕೊಳ್ಳಲು ಸನ್ನೆ ಮಾಡಿದಳು. 'ಇದು ಹಿಮಬಂಡೆಯ ಹೊರಗಿಣುಕೋ ತುದಿಯಷ್ಟೇ, ಒಳಗೆ ಮುಳುಗಿದ್ದು ಬೃಹದಾಕಾರದಲ್ಲಿದೆ' ಅಂದಳು.

16

ಚುಕ್ಕಿ ಬೇರೊಂದು ಪ್ರಕರಣ ಕುರಿತು ವಿವರ ಕಲೆ ಹಾಕುತ್ತಿರುವಾಗ, ಆಕಸ್ಮಿಕವಾಗಿ ಇದರ ಸುಳಿವು ಸಿಕ್ಕಿತ್ತು. ಪರಿಚಯವಿರುವವರದ್ದೆ ಆಗಿದ್ದಕ್ಕೆ ಸಹಜವಾಗಿ ಕುತೂಹಲ ಗರಿಗೆದರಿತ್ತು. ಉತ್ತರ ಭಾರತದಲ್ಲಿ ಅವಳಿಗೆ ಮಿತ್ರರಿದ್ದರು. ಅವತ್ತಿನಿಂದ ಸಮಯವಾದಾಗೆಲ್ಲ ಸುಳಿವುಗಳನ್ನು ಕಲೆಹಾಕುತ್ತಾ ಹೋಗಿದ್ದಳು.

'... ಈಗಿನ ಲಾಲಕಿಶೋರ ಬಿಕಾನೇರಿ ತಂದೆ, ಚಮನಕಿಶೋರ ಬಿಕಾನೇರಿ ದಿಲ್ಲಿಯ ಕರೋಲಬಾಗಿನ ಇಕ್ಕಟ್ಟಾದ ಗಲ್ಲಿಯೊಂದರಲ್ಲಿ, ಸೈಕಲ್ಲು ನಿಲ್ಲಿಸಲೂ ಸಾಲದಂತಹ ಸಣ್ಣ ಕೊಠಡಿಯಲ್ಲಿ, ಮಸಾಲೆ ಪುಡಿ, ಉಪ್ಪಿನಕಾಯಿ ಮುಂತಾದ್ದು ಮಾರುತ್ತಿದ್ದ. ಮಾತಿನ ಚಾಲಾಕಿತನ, ಜನರನ್ನು ಗುರುತಿಸುವ ಜಾಣತನ ಎರಡರಿಂದ ಅಂಗಡಿಯನ್ನು ಬೆಳೆಸಿ ಸಗಟು ವ್ಯಾಪಾರದ ಹಂತಕ್ಕೆ ತಂದ. ಏನೇನು ಮಾಡಿದನೋ, ಅಂತು ನಾಕಾರುವರ್ಷದಲ್ಲಿ ಪೊಟ್ಟಣಗಳಲ್ಲಿ ತುಂಬುವ ಮಸಾಲೆ ಪುಡಿ, ಸೋಹನ್‌ಪಾಪ್ಡಿ, ಕರಿದ ತಿಂಡಿಗಳು ಹೀಗೆ ಉದ್ಯಮವನ್ನೆ ಶುರುಮಾಡಿ ದೇಶದಾದ್ಯಂತ ಅವುಗಳನ್ನು ಕಳಿಸತೊಡಗಿದ. ಎಕ್ಸ್‌ಪೋರ್ಟ್ ಮಾಡಲು ಶುರುಮಾಡಿದ. ಆದರೆ ಹೇಗೆ ಗಳಿಸಿದ ಅದು ನಿಗೂಢ ಅನ್ನತಾರೆ ಜನ. ದಿಢೀರನೆ ಸ್ವಂತ ಕಂಪನಿಯನ್ನು ಹುಟ್ಟುಹಾಕಿದ. ತೊಂಬತ್ತರ ದಶಕದಲ್ಲಿ, ಯಾವ್ಯಾವುದೋ ಹೆಸರಿನಲ್ಲಿ ಕಂಪನಿಗಳು ಹುಟ್ಟಿಕೊಂಡು ಕುರಿ, ಕೋಳಿ, ಟೀಕ್‌ವುಡ್ ಅಂತೆಲ್ಲ ಜನರಿಂದ ಶೇರುಹಣವನ್ನು ಕಲೆಹಾಕಿ ಕುರಿಗಳನ್ನಾಗಿ ಮಾಡುವ ಕೆಲಸ ನಡೆಯಿತು. ಇವತ್ತಿನ ಒಂದು ಕುರಿ, ಮರಿ ಹಾಕುತ್ತಾ ನಾಕು ವರ್ಷದಲ್ಲಿ ಹತ್ತುಸಾವಿರ ಕುರಿ ಅಂತ ಕನಸು ಕೊಟ್ಟರು. ಹಾಗೆಯೆ ಘನ ಅಡಿಗಳಲ್ಲಿ ಟೀಕ್‌ವುಡ್! ಅದರಲ್ಲಿ ಸುಮಾರು ಎಲ್ಲಾ ಕಂಪನಿಗಳು, ಆ ಹಂತದಲ್ಲೆ ನಾಪತ್ತೆಯಾದ್ದು ನೆನಪಿರಬಹುದು. ಸಂಬಂಧಿಕರ ಹೆಸರಲ್ಲಿ ಚಮನಕಿಶೋರನೂ ಅಂತಹ ಕೆಲಸ ಮಾಡಿದ ಅನ್ನುತ್ತಾರೆ. ಆಮೇಲೆ, ಇವನ ಹೆಸರಿನ ಕಂಪನಿಗಳು ಹೆಸರು ಮಾಡುತ್ತಾ ಶೇರುದರ ಏರಿಸಿಕೊಂಡವು. ಉದ್ಯಮಿಯಾಗಿ ಗುರುತಿಸಿಕೊಂಡವ, ಉದ್ಯಮವನ್ನು ಕ್ರಮೇಣ ಜವಳಿ, ಎಲೆಕ್ಟ್ರಾನಿಕ್ಸ್, ಔಷಧ ಹೀಗೆ ಹಲವು ದಿಸೆಯಲ್ಲಿ ವಿಸ್ತರಿಸಿಕೊಳ್ಳುತ್ತ ಹೋದ. ಮಗ ಜೊತೆಯಿದ್ದ.

ಇವತ್ತು ಜಗತ್ತಿನಲ್ಲಿ, ವ್ಯಾಪಾರದ ಪೈಪೋಟಿ ಹೇಗಿದೆಯೆಂದರೆ, ಯಾವ ಮಾರ್ಗವೂ ರಾಜಮಾರ್ಗವೆ ಆಗಿಬಿಟ್ಟಿದೆ. 'ಎಕನಾಮಿಕ್ ಹಿಟ್‌ಮ್ಯಾನ್' ಶಬ್ದ ಕೇಳಿದೀರಾ?' ನಿಲ್ಲಿಸಿ ಎಲ್ಲರತ್ತ ನೋಡಿದಳು ಚುಕ್ಕಿ. 'ಅಮೆರಿಕದ ಜಾನ್ ಪಾರ್ಕಿನ್ಸ್ ಎಂಬಾತ ತನ್ನ ತಪ್ಪೊಪ್ಪಿಗೆಯ ಪುಸ್ತಕ ಬರೆದು, ಇದನ್ನು ಬಹಿರಂಗಪಡಿಸಿದಾಗ, ಜಗತ್ತು ಬೆಚ್ಚಿಬಿತ್ತು. ಸ್ವತಃ ಆತ ಒಬ್ಬ ಹಿಟ್ ಮ್ಯಾನ್ ಅರ್ಥಾತ್ ಕನ್ನಡದಲ್ಲಿ 'ಅರ್ಥವ್ಯವಸ್ಥಾ ಹಂತಕ' ಆಗಿದ್ದ. ಅಭಿವೃದ್ಧಿ ಹೊಂದಿರದ ದೇಶಗಳಿಗೆ ಇವರು ಹೋಗುತ್ತಾರೆ. ಅಲ್ಲಿಯ ಗಣ್ಯರನ್ನು, ಸರಕಾರದ ಪ್ರಮುಖರನ್ನು ಸಂಧಿಸಿ ಸಖ್ಯ ಗಳಿಸಿ ಬುಟ್ಟಿಗೆ ಹಾಕಿಕೊಳ್ಳುತ್ತಾರೆ. ಅವರ ದೇಶಕ್ಕೆ ಅತ್ಯವಶ್ಯ ಅಂತ ಬಿಂಬಿಸಿ, ನಂಬಿಸಿ ಬಿಲಿಯನ್ ಬಿಲಿಯನ್ ಡಾಲರುಗಳ ಬೃಹತ್ ಯೋಜನೆಗಳನ್ನು ಮಂಜೂರು ಮಾಡಿಸುತ್ತಾರೆ. ಆ ಅಪಾರ ಮೊತ್ತದ ಹಣವನ್ನು ಅಮೆರಿಕವೆ ಕೊಡುತ್ತದೆ. ಸಾಲ ಕೊಡುವಾಗ, ತಾಂತ್ರಿಕ ಜ್ಞಾನ ಮುಂತಾದ ಕಾರಣವೊಡ್ಡಿ ಅಮೆರಿಕದ ಕಂಪನಿಗಳಿಗೇ ಕಂಟ್ರಾಕ್ಟು ಸಿಗುವಂತೆ ಕರಾರಾಗುತ್ತದೆ. ಹೀಗೆ, ಮಂಜೂರಾದ ಸಾಲದ ಡಾಲರೆಲ್ಲ ಮತ್ತೆ ಅಮೆರಿಕಕ್ಕೇ ಸೇರುತ್ತದೆ. ಆದರೆ, ಸಾಲ ಮಾತ್ರ ದೇಶಗಳ ಮೇಲೆ ಇರುತ್ತದೆ. ಆ ಹೊರೆಯಲ್ಲಿ ಸೊಂಟ ಮುರಿದು ಅವು ಆರ್ಥಿಕವಾಗಿ ಇನ್ನಷ್ಟು ನೆಲಕಚ್ಚುತ್ತವೆ! ವೆನುಜುವೆಲ ಅಲ್ಲದೆ ಕೆಲವು ದೇಶಗಳು ಹೀಗೇ ದಿವಾಳಿಯಾಗಿದ್ದು. ಇದು ಅವಶ್ಯಕತೆಯನ್ನೂ ನಾವೆ ಸೃಷ್ಟಿಸಿಕೊಟ್ಟು, ಸರಕನ್ನೂ ದಾಟಿಸುವ ಜಾಣ್ಮೆ!

ಇದನ್ನೇ ಕಂಪನಿಗಳು ಬೇರೆ ರೀತಿ ಮಾಡುತ್ತವೆ. ಒಂದೇ ಸರಕನ್ನು ಬೇರೆ ಬೇರೆ ಕಂಪನಿಗಳು ಉತ್ಪಾದಿಸತೊಡಗಿದರೆ, ಪೈಪೋಟಿಯಾಗಿ ಕಡಿಮೆ ಮೌಲ್ಯದಲ್ಲಿ ಉತ್ತಮ ಸರಕು ಸಿಗುವಂತಾಗುತ್ತದೆ ಅಂತ ಸಹಜ ನಿಯಮ. ಅದಕ್ಕೇ ದೊಡ್ಡ ಕಂಪನಿಗಳು, ಇಂತಹ ಸಣ್ಣ ಕಂಪನಿಗಳನ್ನು ಕೊಂಡುಕೊಂಡುಬಿಡುತ್ತವೆ. ಹೀಗೆ ಏಕಸ್ವಾಮ್ಯ ಸಾಧಿಸುತ್ತವೆ. ಈ ಬಿಕಾನೇರಿ ಮಾಡಿದ್ದೂ ಅದನ್ನೆ. ವರ್ಷಗಟ್ಟಲೆ ನಷ್ಟವಾದರೂ ಲೆಕ್ಕಿಸದೆ ಅಗ್ಗದಲ್ಲಿ ಮಾರುವುದು, ಚಿಕ್ಕ ಉತ್ಪಾದಕರನ್ನು ನೆಲಕಚ್ಚಿಸುವುದು, ಇಲ್ಲ ಕೊಂಡುಕೊಳ್ಳುವುದು. ಇನ್ನೂ ಏನೇನೊ ಮಾರ್ಗಸೂಚಿಗಳನ್ನು ಅವನೇ ಅನ್ವೇಷಿಸಿದ್ದು. ಅವನ ಕಾಲದಲ್ಲೆ ಅವನ ಉದ್ಯಮ ಸಮುದ್ರ ಲಂಘಿಸಿ, ವಿದೇಶಗಳಿಗೂ ಕಾಲಿಟ್ಟಿತು. ಆಹಾರ್, ಆರೋಗ್ಯ್, ಆಭೂಷಣ್, ಆವಾಸ್, ಆಮೋದ್, ಆಚ್ಛಾದನ್ ಹೀಗೆ ದೇವನಾಗರಿ 'ಆ'ದಿಂದ ಶುರುವಾಗುವ ಉದ್ಯಮಗಳನ್ನು ಆವರಿಸಿಕೊಳ್ಳುತ್ತ ಹೋದ.

ಅವನ ಮಗ ಲಾಲಕಿಶೋರ ಬಿಕಾನೇರಿ, ಅಪ್ಪನನ್ನೂ ಮೀರಿಸಿದ. ಕೆಲಸ ಸಾಧನೆಯಾಗುವ